(ಕಂದಾಯ ಇಲಾಖೆ)

# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ಸಂ.ಕಂ.ಪಹಣಿ:ಅಪೀಲು:253/2014-15 ದಿನಾಂಕ:05.07.2016.

**ಉಪಸ್ಥಿತರು: ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**
**ಸಹಾಯಕ ಆಯುಕ್ತರು, ಹೊಸಪೇಟೆ.**

* * * * *

**ವಾದಿಗಳು: ಶ್ರೀ/ ಶ್ರೀಮತಿ**

1] ಸಿಂಧಿಗೇರಿ ದುರುಗಮ್ಮ ಗಂಡ
ದಿ॥ ಸಿಂಧಿಗೇರಿ ಯಲ್ಲಪ್ಪ,
ವಾಸ: 26ನೇ ವಾರ್ಡ್, ಚಿತ್ರಕೇರಿ ಏರಿಯಾ,
ಹೊಸಪೇಟೆ ಪೋಸ್ಟ್ & ತಾಲೂಕು,
ಬಳ್ಳಾರಿ ಜಿಲ್ಲೆ.

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1] ತಹಶೀಲ್ದಾರರು, ಹೊಸಪೇಟೆ.

[ಶ್ರೀ ಶ್ರೀಪತಿರಾವ್, ವಕೀಲರು, ಹೊಸಪೇಟೆ]

**ವ್ಯಾಜ್ಯದಜಮೀನು**

| ತಾಲೂಕು | ಹೋಬಳಿ | ಗ್ರಾಮ | ಸ.ನಂ | ವಿಸ್ತೀರ್ಣ |
|---|---|---|---|---|
| ಹೊಸಪೇಟೆ | ಹೊಸಪೇಟೆ | ಸಂಕಲಾಪುರ | 167/2 | 05 ಎಕರೆ 05 ಸೆಂಟ್ಸ್ ಪೈಕಿ 00 ಎಕರೆ 72 ಸೆಂಟ್ಸ್ |

**ಪೀಠಿಕೆ:-**

ಹೊಸಪೇಟೆ ತಾಲೂಕು ಹೊಸಪೇಟೆ ಹೋಬಳಿ ಸಂಕಲಾಪುರ ಗ್ರಾಮದ ಸ.ನಂ.167/2 ವಿಸ್ತೀರ್ಣ:05 ಎಕರೆ 05 ಸೆಂಟ್ಸ್ ಪೈಕಿ 00 ಎಕರೆ 72 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಹೊಸಪೇಟೆ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ: ಹೆಚ್.15/2014-15 ದಿನಾಂಕ:09.07.2014 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಮೇಲ್ಮನವಿಯನ್ನು ವಾದಿಪರ ವಕೀಲರು ದಿನಾಂಕ:20.01.2015 ರಂದು ಸಲ್ಲಿಸಿರುತ್ತಾರೆ.

ವಾದಿಗಳ ಪರ ವಕೀಲರು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:11.03.2014 ಕ್ಕೆ ನಿಗಧಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಪರ ವಕೀಲರ ಪ್ರಕಾರ, ಸದರಿ ವ್ಯಾಜ್ಯದ ಜಮಿನಿಗೆ ಸಂಬಂಧಿಸಿದಂತೆ, ಸದರಿ ಪ್ರಶ್ನಿತ ಹಕ್ಕು ಬದಲಾವಣೆಗೆ ಯಾರಿಂದಲೂ ಯಾವುದೇ ಆಕ್ಷೇಪಣೆಗಳು ಇಲ್ಲದಿದ್ದರೂ, ದಾಖಲೆಗಳನ್ನು ಸರಿಯಾಗಿ ಪರಿಶೀಲಿಸದೇ, ಪ್ರತಿವಾದಿಯು ಕೇವಲ ಜಮೀನಿನ ಮುಖ್ಯ ಸ್ವಾಧೀನದಾರರ ಮರಣ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲವೆಂಬ ಕಾರಣ ನೀಡಿ, ಎಲ್ಲಾ ದಾಖಲೆಗಳನ್ನು ನೀಡಿದಾಗ್ಯೂ ದಾಖಲೆಗಳನ್ನು ಸರಿಯಾಗಿ ಪರಿಶೀಲಿಸದೇ ಹಾಗೂ ವಾದಿಗೆ ಯಾವುದೇ ಅವಕಾಶ ನೀಡದೇ ತರಾತುರಿಯಲ್ಲಿ ಪ್ರತಿವಾದಿಯು ಮಾಡಿರುವ ಆದೇಶವು ಕಾನೂನುಬಾಹಿರವಾಗಿರುವುದಾಗಿ, ಸದರಿ ಅಪೀಲನ್ನು ಅಂಗೀಕರಿಸಿ, ಸದರಿ ಪ್ರಶ್ನಿತ ಆದೇಶವನ್ನು ತಳ್ಳಿಹಾಕುವಂತೆ ಮನವಿ ಮಾಡಿಕೊಂಡಿರುತ್ತಾರೆ.

**ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಡತದಲ್ಲಿಯ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ.**

1. ಸದರಿ ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ, 2014-15 ನೇ ಸಾಲಿನ ಪಹಣಿ ಪತ್ರಿಕೆ ಸಲ್ಲಿಸಿದ್ದು, ಸ.ನಂ.167/2 ವಿಸ್ತೀರ್ಣ:05 ಎಕರೆ 05 ಸೆಂಟ್ಸ್ ಪೈಕಿ 00 ಎಕರೆ 72 ಸೆಂಟ್ಸ್ ಜಮೀನು ಸಿಂಧಗೇರಿ ಯಲ್ಲಪ್ಪ ತಾಯಿ ಗಂಗಮ್ಮ ಇವರಿಗೆ ಹೆಸರಿಗೆ ನಮೂದು ಇರುವುದು ಕಂಡು ಬಂದಿರುತ್ತದೆ.
2. ಸದರಿ ಪ್ರಶ್ನಿತ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್.15/2014-15 ದಿನಾಂಕ:09.07.2014 ವನ್ನು ಸಲ್ಲಿಸಿದ್ದು, ಸದರಿ ಆದೇಶದಲ್ಲಿ ಜಮೀನಿನ ಮುಖ್ಯ ಸ್ವಾಧೀನದಾರರ ಮರಣ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ ಪ್ರಯುಕ್ತ ಮ್ಯುಟೇಷನ್ ವಹಿವಾಟನ್ನು ತಿರಸ್ಕರಿಸಿರುತ್ತಾರೆ ಎಂದು ಆದೇಶಿಸಿರುವುದು ಕಂಡುಬಂದಿರುತ್ತದೆ.
3. ಸಿಂಧಿಗೇರಿ ಯಲ್ಲಪ್ಪ ಇವರ ವಂಶವೃಕ್ಷವನ್ನು ಸಲ್ಲಿಸಿರುತ್ತಾರೆ.
4. ಸದರಿ ವ್ಯಾಜ್ಯದ ಜಮೀನು ಸಿಂಧಿಗೇರಿ ಯಲ್ಲಪ್ಪ ಇವರಿಗೆ ಮಂಜೂರು ಆದ ಬಗ್ಗೆ ಸಾಗುವಳಿ ಚೀಟಿ-ಫಾರಂ.ನಂ.777 ಡಿ.ಆರ್.ನಂ.3904/93-94 ದಿನಾಂಕ:11.08.1993 ರ ಪ್ರತಿಯನ್ನು ಲಗತ್ತಿಸಿರುತ್ತಾರೆ.
5. ಸದರಿ ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ, ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಹೊಸಪೇಟೆ ಇವರು ನೀಡಿರುವ ನಮೂನೆ-10 ರ ಪ್ರತಿಯನ್ನು ಸಲ್ಲಿಸಿದ್ದು, ಇದರಲ್ಲಿ ಸ.ನಂ.167/2 ವಿಸ್ತೀರ್ಣ:05 ಎಕರೆ 05 ಸೆಂಟ್ಸ್ ಪೈಕಿ 00 ಎಕರೆ 72 ಸೆಂಟ್ಸ್ ಜಮೀನು ಸಿಂಧಿಗೇರಿ ಯಲ್ಲಪ್ಪ ತಾಯಿ ಗಂಗಮ್ಮ ಇವರ ಹೆಸರಿಗೆ ನಮೂದು ಇರುವುದು ಕಂಡುಬಂದಿರುತ್ತದೆ.

ವಾದಿಗಳು ದಿನಾಂಕ:14.06.2016 ರಂದು ವಿಚಾರಣೆಗೆ ಹಾಜರಾಗಿ ಸಿಂಧಿಗೇರಿ ಯಲ್ಲಪ್ಪ ಇವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇಲೆ, ಹೊಸಪೇಟೆ ತಾಲೂಕು ಹೊಸಪೇಟೆ ಹೋಬಳಿ ಸಂಕಲಾಪುರ ಗ್ರಾಮದ ಸ.ನಂ.167/2 ವಿಸ್ತೀರ್ಣ:05 ಎಕರೆ 05 ಸೆಂಟ್ಸ್ ಪೈಕಿ 00 ಎಕರೆ 72 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಹೊಸಪೇಟೆ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ: ಹೆಚ್.15/2014-15 ದಿನಾಂಕ:09.07.2014 ವನ್ನು ರದ್ದುಪಡಿಸುತ್ತಾ, ಸದರಿ ವ್ಯಾಜ್ಯದ ಜಮೀನನ್ನು ಪೋತಿ ವಾರಸ ಪ್ರಕಾರ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡಂತೆ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ಅಂಗೀಕರಿಸುತ್ತಾ,** ಹೊಸಪೇಟೆ ತಾಲೂಕು ಹೊಸಪೇಟೆ ಹೋಬಳಿ ಸಂಕಲಾಪುರ ಗ್ರಾಮದ ಸ.ನಂ.167/2 ವಿಸ್ತೀರ್ಣ:05 ಎಕರೆ 05 ಸೆಂಟ್ಸ್ ಪೈಕಿ 00 ಎಕರೆ 72 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಹೊಸಪೇಟೆ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ: ಹೆಚ್.15/2014-15 ದಿನಾಂಕ:09.07.2014 ವನ್ನು ರದ್ದುಪಡಿಸುತ್ತಾ, ಸದರಿ ವ್ಯಾಜ್ಯದ ಜಮೀನನ್ನು ಪೋತಿ ವಾರಸ ಪ್ರಕಾರ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ತಹಶೀಲ್ದಾರರು, ಹೊಸಪೇಟೆ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:05.07.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ ]
**ಸಹಾಯಕ ಆಯುಕ್ತರು,**
**ಹೊಸಪೇಟೆ.**

ವಾದಿ : ಪ್ರತಿವಾದಿಗಳಿಗೆ
<u>ಪ್ರತಿಯನ್ನು</u>:- ತಹಶೀಲ್ದಾರರು, ಹೊಸಪೇಟೆ ಇವರಿಗೆ ಸಂಬಂಧಿಸಿದ ಮೂಲ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.